ನಡೆಯುತ್ತಿದೆ. 2 ಕಾಮಗಾರಿಗಳಿಗೆ 98-99ನೇ ಸಾಲಿನಲ್ಲಿ ಲಭ್ಯವಾಗುವ ಅನುದಾನವನ್ನು ಅವಲಂಬಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಇ) ಬಂದಿದೆ

ಈ) ತುರ್ತುಗೋಡೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಹಾಗೂ ಈ ಪ್ರದೇಶದಲ್ಲಿ ಶಾಶ್ವತ ತಡೆಗೋಡೆ ರಚನೆ ಮಾಡಲು 1998-99 ನೇ ಸಾಲಿನ ಆಯವ್ಯಯದಲ್ಲಿ ದೊರಕಬಹುದಾದ ಅನುದಾನವನ್ನು ಅವಲಂಬಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಉ) 344.15 ಲಕ್ಷ ರೂ.ಗಳು ಬೇಕಾಗಬಹುದು. 1997-98ನೇ ಸಾಲಿನಲ್ಲಿ 10.10 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳಲು ಇನ್ನು 334.05 ಲಕ್ಷ ರೂ. ಗಳು ಬೇಕಾಗುತ್ತವೆ. ಅನುದಾನ ಲಭ್ಯತೆಯ ಮೇಲೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಉಳ್ಳಾಲದಲ್ಲಿ ಸಬ್-ಸ್ಟೇಷನ್ ಕಾಮಗಾರಿ

294(572) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಳ್ಳಾಲದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸ್ಥಾಪಿಸಲು ಉದ್ದೇಶಿಸಿರುವ ಸಬ್ ಸ್ಟೇಷನ್ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಶರಣ ಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಇತ್ತೀಚೆಗಷ್ಟೇ ಈ ಸಬ್-ಸ್ಟೇಷನ್ ನಿರ್ಮಾಣಕ್ಕೆ ಬೇಕಾಗಿರುವ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ. ಈಗ ಸಬ್‌ಸ್ಟೇಷನ್ ನಿರ್ಮಾಣಕ್ಕೆ ಸಂಬಂಧಿಸಿದ ಪೂರ್ವ ಭಾವಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಆ) ಈ ಸಬ್ ಸ್ಟೇಷನ್ ನಿರ್ಮಾಣದ ಕಾರ್ಯಗಳನ್ನು ಡಿಸೆಂಬರ್ 98ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. ಆದರೆ ಇದು ಮಂಡಳಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಅವಲಂಬಿಸಿರುತ್ತದೆ.

ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ವಿದ್ಯುತ್ ಕಳವಿನಿಂದಾದ ನಷ್ಟ

295(518) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ವಿದ್ಯುತ್ ಕಳುವು ಮಾಡಿದ ಪ್ರಕರಣಗಳನ್ನು ಕಂಡುಹಿಡಿಯಲಾಗಿದೆ?

(ಅವರುಗಳ ಹೆಸರುಗಳೊಂದಿಗೆ ವಿವರ ನೀಡುವುದು)

ಆ) ಈ ವಿದ್ಯುತ್ ಕಳ್ಳತನದಿಂದ ಕೆ.ಇ.ಬಿ.ಗೆ ಆಗಿರುವ ಹಾನಿ ಎಷ್ಟು ಸದರಿಯವರ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೆಷ್ಟು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರಗಳಲ್ಲಿ 1995-96, 1996-97 ಸಾಲಿನಲ್ಲಿ ಯಾವುದು ವಿದ್ಯುತ್ ಕಳ್ಳತನ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. 1997-98 ಸಾಲಿನಲ್ಲಿ (28-2-98 ರವರೆವಿಗೆ) ಒಟ್ಟು 13 ವಿದ್ಯುತ್ ಕಳವು ಮಾಡಿದ ಪ್ರಕರಣಗಳು ಪತ್ತೆ ಹಚ್ಚಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)

ಆ) 1995-96, 1996-97 ಸಾಲಿನಲ್ಲಿ ಯಾವುದು ವಿದ್ಯುತ್ ಕಳ್ಳತನ ಪ್ರಕರಣಗಳು ಪತ್ತೆಯಾಗಿರುವುದಿಲ್ಲ. 1997-98 ಸಾಲಿನಲ್ಲಿ (28-2-96 ರವರೆವಿಗೆ) ಹುಬ್ಬಳ್ಳಿ ಧಾರವಾಡ ಮಹಾನಗರಗಳಲ್ಲಿ ಒಟ್ಟು 13 ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಮಂಡಳಿಯ ಜಾಗೃತ ದಳ ಮತ್ತು ಟೆಕ್ನಿಕಲ್ ಆಡಿಟ್ ಸೆಲ್‌ಗಳು ಪತ್ತೆ ಹಚ್ಚಿದ್ದು ಈ ಪ್ರಕರಣಗಳಲ್ಲಿ ಕಳುವಾದ ವಿದ್ಯುತ್ ಪ್ರಮಾಣವನ್ನು ಲೆಕ್ಕಾಚಾರ ಮಾಡಿ ಇದರ ಬಗ್ಗೆ 1,51,19,873 ರೂ.ಗಳ ದಂಡವನ್ನು ವಿಧಿಸಿ ಈ ಹಣದ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಕಳುವಿನ ಪ್ರಕರಣಗಳ ವಿವರ

1995-96 : ಯಾವುದೂ ಇಲ್ಲ

1996-97 : ಯಾವುದೂ ಇಲ್ಲ

1997-98 : 1-4-97 ರಿಂದ 28-2-98ರ ವರೆಗಿನ ವಿದ್ಯುತ್ ಕಳವು ಪ್ರಕರಣಗಳ ವಿವರ ಕೆಳಕಂಡಂತಿವೆ.

ಕ್ರ. ಸಂ.	ಸ್ಥಾವರ ಸಂ.	ಗ್ರಾಹಕರ ಹೆಸರು, ವಿಳಾಸ	ಗುನ್ನೆ ಸಂಖ್ಯೆ	ದಿನಾಂಕ	ಪೋಲೀಸ್ ಠಾಣೆಯ ಹೆಸರು	ವಿದ್ಯುತ್ ಹಾನಿ	ಒಟ್ಟು ಹಾನಿಯಾದ ಮೊತ್ತ ರೂ.ಗಳಲ್ಲಿ
1.	ಟಿ.ಎಲ್.268	ಲಿಬರ್ಟಿ ಕಾಂಪ್ಲೆಕ್ಸ್	130.97	19-7-1997	ಹಳೇ ಹುಬ್ಬಳ್ಳಿ	10080	1,19,644-00
2.	12943	ದಯೂರ ಲಾಡ್ಜ್ ಹುಬ್ಬಳ್ಳಿ	225.97	28-7-97	ಹುಬ್ಬಳ್ಳಿ ರಹರ್	6135	83,269-00
3.	ಎಂ ಎ ಎಫ್ 192	ರೋಷನಾಂಗ ವಿ.ಎಫ್.ವೈ	2.97	14-8-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	1880	32,274-00
4.	15883	ಸುದರ್ಶನ ಎಂ. ಮಾಳಗಿ, ಹುಬ್ಬಳ್ಳಿ	3.97	22.8.97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	1440	7,662-00
5.	ಎಂಪಿ 8061	ವಿಷ್ಣು ಚಂದ್ರನಾ, ಶೋಬರಾಜ್ ಹುಬ್ಬಳ್ಳಿ	4:97	15-9-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	1566000	93,51,450-00
6.	ಎಂಪಿ 2424	ವಿಷ್ಣು ಚಂದ್ರನಾ, ಶೋಬರಾಜ್ ಹುಬ್ಬಳ್ಳಿ	7:97	06-10-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	958520	50,43,180-0
7.	ಎಂಡಿಹೆಚ್ 19	ಶ್ರೀ ರಾಘವೇಂದ್ರ ಹಾಚರೀಸ್ ಮಂದ್ಯಾಳ ಧಾರವಾಡ	7:97	09-10-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	35100	2,06,819-00
8.	ಎ ಇ ಹೆಚ್ 4889	ಎಸ್. ಬಿ. ನರಾಢ, ಹುಬ್ಬಳ್ಳಿ	10:97	3-11-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	5040	54,131-00
9.	ಎ ಇ ಹೆಚ್ 4889	ಶ್ರೀ ಕೃಷ್ಣಕರಿಯಪ್ಪ, ಉಪಾಪರ, ಹುಬ್ಬಳ್ಳಿ	11:97	17-11-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	250	4,164-00
10.	ಎಂಪಿ 1845	ಶ್ರೀ ರಾಧಕೃಷ್ಣಭಟ್, ಹುಬ್ಬಳ್ಳಿ	20:97	22-11-97	ಜಾಗೃತ ದಳ, ಕವಿಮಂ ಹುಬ್ಬಳ್ಳಿ	12024	1,72,346-00
11.	ಎಂಪಿ 1845	ಶ್ರೀ ಎ.ವಿ. ಬ್ಯಾಳಿ, ಹುಬ್ಬಳ್ಳಿ	6:98	4-2-98	ಜಾಗೃತ ದಳ, ಕವಿಮಂ ಹುಬ್ಬಳ್ಳಿ	609	9,496-00
12.	ಐಪಿ ಸೆಟ್	ಶ್ರೀ ಈರಯ್ಯ ಬಿ. ಮೂಕಶಿವಯ್ಯ ನವರ ಮತಗಟ್ಟಿ	7:98	7-2-98	ಜಾಗೃತ ದಳ, ಕವಿಮಂ ಹುಬ್ಬಳ್ಳಿ	151	583-00
13.	19649	ಪ್ರೀತಮ್ ಹೋಟೆಲ್, ಹುಬ್ಬಳ್ಳಿ	8:98	10-2-98	ಜಾಗೃತ ದಳ, ಕವಿಮಂ ಹುಬ್ಬಳ್ಳಿ	2304	34,855-00